# ಡೈನಮೈಟ್ ಕಿಂಗ್ ನೊಬೆಲ್

■ ಪ್ರಕಾಶ ಎಸ್. ಮನ್ನಂಗಿ




'ಮಾರಕ ಆಯುಧಗಳ ರೂವಾರಿ, ಡೈನಮೈಟ್ ಕಿಂಗ್ ಆಲ್ಫ್ರೆಡ್ ನೊಬೆಲ್ ನಿಧನ' ಎಂಬ ಸುದ್ದಿಯೊಂದು ಪತ್ರಿಕೆಯಲ್ಲಿ ಪ್ರಕಟವಾಗಿತ್ತು. 1888ರಲ್ಲಿ ಪ್ರಕಟವಾದ ಈ ಸುದ್ದಿಯನ್ನು ಓದಿದವರು ಸ್ವೀಡನ್ ದೇಶದ ಆಲ್ಫ್ರೆಡ್ ನೊಬೆಲ್. ತಮ್ಮದೇ ಸಾವಿನ ಸುದ್ದಿಯನ್ನು ಅವರೇ ಪತ್ರಿಕೆಯಲ್ಲಿ ಓದಿದ ಸೋಜಿಗವಿದು.

ಮರುದಿನ ಅದೇ ಪತ್ರಿಕೆಯಲ್ಲಿ 'ನಿಧನ ಹೊಂದಿದವರು ಆಲ್ಫ್ರೆಡ್ ಸೋದರ ಸಂಬಂಧಿ. ಅಚಾತುರ್ಯದಿಂದ ಆದ ಈ ಪ್ರಮಾದಕ್ಕಾಗಿ ವಿಷಾದಿಸುತ್ತೇವೆ' ಎಂಬ ಸ್ಪಷ್ಟೀಕರಣವನ್ನು ಸಂಪಾದಕರು ನೀಡಿದ್ದರು.

ಈ ಸುದ್ದಿಗಳನ್ನು ಓದಿದ ಆಲ್ಫ್ರೆಡ್ ಅವರಿಗೆ ಒಂದೆಡೆ ಕೋಪ ಬಂದರೆ, ಮತ್ತೊಂದೆಡೆ ನೋವುಂಟಾಯಿತು. ಅವರನ್ನು ಮಾರಕ ಆಯುಧಗಳ ರೂವಾರಿ, ಡೈನಮೈಟ್ ಕಿಂಗ್ ಎಂದು ಉಲ್ಲೇಖಿಸಿ ಬರೆದ ಬಗ್ಗೆ ಅಸಹನೆಯುಂಟಾಯಿತು.

ಮುಂದೆ ಅವರಿಗೆ ಈ ಘಟನೆಯನ್ನು ಮರೆಯಲು ಸಾಧ್ಯವಾಗಲಿಲ್ಲ. ಹಾಗಾದರೆ ನಾನು ನಿಧನ ಹೊಂದಿದರೆ ಮಾರಕ ಆಯುಧಗಳ ರೂವಾರಿ, ಡೈನಮೈಟ್ ಕಿಂಗ್ ಎಂದಷ್ಟೇ ಜನರು ನನ್ನನ್ನು ನೆನಪಿಸಿಕೊಳ್ಳುತ್ತಾರೆಯೇ? ಮತ್ತೇನೂ ನಾನು ಮಾಡಿಲ್ಲವೇ? ಎಂದು ಯೋಚಿಸತೊಡಗಿದರು. ಇನ್ನು ಮುಂದೆ ಜನರ ನೆನಪಿನಲ್ಲಿ ಉಳಿಯುವಂತೆ ಏನಾದರೂ ಮಾಡಬೇಕೆಂದು ತೀರ್ಮಾನಿಸಿದರು.

ಆಲ್ಫ್ರೆಡ್ ನೊಬೆಲ್ ವಿಜ್ಞಾನಿ, ಸಂಶೋಧಕ ಮತ್ತು ಉದ್ಯಮಿಯೂ ಆಗಿದ್ದರು. ಇವರು ಕಂಡುಹಿಡಿದ ಡೈನಮೈಟ್ ಗಣಿ ಉದ್ಯಮದಲ್ಲಿ ಬಳಕೆಯಾಗುತ್ತಿತ್ತು. ಅನಂತರ ಅದು ಯುದ್ಧರಂಗದಲ್ಲೂ ಬಳಕೆಯಾಗತೊಡಗಿತು. ಇದರಿಂದ ಡೈನಮೈಟ್ ಬೇಡಿಕೆಯೂ ಹೆಚ್ಚಾಯಿತು. ಕಾರಣ ಡೈನಮೈಟ್ ಉತ್ಪಾದನೆಗಾಗಿ ಸ್ವತಃ ಆಲ್ಫ್ರೆಡ್‌ರು ಅನೇಕ ಕಾರ್ಖಾನೆಗಳನ್ನು ತೆರೆಯಬೇಕಾಯಿತು. ಜೊತೆಗೆ ಅಪಾರ ಸಂಪತ್ತೂ ಕ್ರೋಡೀಕರಣವಾಯಿತು. ಇವರನ್ನು ಜನರು ಡೈನಮೈಟ್ ಕಿಂಗ್ ಎಂದು ಕರೆಯತೊಡಗಿದರು.

ಬಹಳಷ್ಟು ಯೋಚಿಸಿದ ಆಲ್ಫ್ರೆಡ್‌ರು ದೊಡ್ಡ ಮೊತ್ತದ ಅಂತರರಾಷ್ಟ್ರೀಯ ಬಹುಮಾನವನ್ನು ಸ್ಥಾಪಿಸುವ ತೀರ್ಮಾನಕ್ಕೆ ಬಂದರು. ತಾವು ಗಳಿಸಿದ್ದ ಸಂಪತ್ತನ್ನು ಹೂಡಿಕೆ ಮಾಡಿ ನೊಬೆಲ್ ಹೆಸರಿನಲ್ಲಿ ಬಹುಮಾನ ನೀಡುವ ನಿರ್ಣಯಕ್ಕೆ ಬಂದರು. ಈ ಬಹುಮಾನವನ್ನು ಸಾಹಿತ್ಯ, ರಸಾಯನಶಾಸ್ತ್ರ, ಭೌತಶಾಸ್ತ್ರ, ವೈದ್ಯಕೀಯ ಮತ್ತು ವಿಶ್ವಶಾಂತಿ ಮೊದಲಾದ ಕ್ಷೇತ್ರಗಳಲ್ಲಿ ಅನನ್ಯ ಸಾಧನೆ ಮಾಡಿದ ಮೇಧಾವಿಗಳಿಗೆ ನೀಡುವ ವ್ಯವಸ್ಥೆಯಾಯಿತು.

1901 ರಲ್ಲಿ ಸ್ಥಾಪಿತವಾದ ನೊಬೆಲ್ ಬಹುಮಾನ ಇಂದಿಗೂ ಜಗತ್ತಿನ ಅತ್ಯುನ್ನತ ಪ್ರಶಸ್ತಿ ಆಗಿದೆ. ಇತ್ತೀಚೆಗೆ ಅರ್ಥಶಾಸ್ತ್ರ ಕ್ಷೇತ್ರಕ್ಕೂ ಬಹುಮಾನ ನೀಡಲಾಗುತ್ತಿದೆ. ಇಷ್ಟು ವರ್ಷಗಳಲ್ಲಿ ನೂರಾರು ಮಂದಿ ಈ ಪ್ರಶಸ್ತಿ ಪಡೆದಿದ್ದಾರೆ. ಈ ಪ್ರಶಸ್ತಿ ಪಡೆಯಲು ಜಗತ್ತಿನೆಲ್ಲೆಡೆ ಜನರು ಕನಸು ಕಾಣುತ್ತಾರೆ. ಕೆಲವರು ಎರಡೆರಡು ಬಾರಿ ಈ ಪ್ರಶಸ್ತಿ ಪಡೆದ ಭಾಗ್ಯಶಾಲಿಗಳಾಗಿದ್ದಾರೆ. ಮೇರಿ ಕ್ಯೂರಿ ಕುಟುಂಬಕ್ಕೆ ಐದು ಬಾರಿ ಈ ಪ್ರಶಸ್ತಿಗಳು ದಕ್ಕಿದ್ದು ದಾಖಲೆಯಾಗಿದೆ. ಭಾರತೀಯರಿಗೆ ಮತ್ತು ಅನಿವಾಸಿ ಭಾರತೀಯರಿಗೂ ಈ ಪ್ರಶಸ್ತಿ ದೊರಕಿದೆ.

ಈಗ ಈ ಬಹುಮಾನದ ಮೊತ್ತ ಅಂದಾಜು ಏಳು ಕೋಟಿ ಇಪ್ಪತ್ತೆರಡು ಲಕ್ಷದಷ್ಟು ರೂಪಾಯಿ (2021ರ ಪ್ರಕಾರ). ಈಗ ಜಗತ್ತಿನಲ್ಲಿ ಆಲ್ಫ್ರೆಡ್ ನೊಬೆಲ್‌ರ ಹೆಸರು ಸಾಧಕರನ್ನು ಬೆಳೆಸುವಲ್ಲಿ ಮಹತ್ತರವಾದ ಮೈಲುಗಲ್ಲಾಗಿದೆ. ಮನಸ್ಸು ಮಾಡಿದರೆ ನೊಬೆಲ್ ಅವರಂತೆ ಜನರ ನೆನಪಿನಲ್ಲುಳಿಯುವಂತಹ ಸಾಧನೆಯನ್ನು ಮಾಡಬಹುದು ಅಲ್ಲವೇ? ■